# ಸಮಗ್ರ ಸಂಶೋಧಕ: ಎಂ.ಎಂ. ಕಲಬುರ್ಗಿ

**ರಾಜಶೇಖರ ಬಿರಾದಾರ**

ಕನ್ನಡ ಸಹಾಯಕ ಪ್ರಾಧ್ಯಾಪಕರು, ಶ್ರೀ ಸಿ.ಎಂ. ಮಾಮನಿ ಸರಕಾರಿ ಪ್ರಥಮ ದರ್ಜೆ ಕಾಲೇಜು, ಯರಗಟ್ಟಿ, ಬೆಳಗಾವಿ.

DOI: https://doi.org/10.5281/zenodo.17297597

## ABSTRACT:

**ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ**
**ಹರದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ.**
**ಒಮ್ಮನವಾದಡೆ ಒಡನೆ ನುಡಿವನು**
**ಇಮ್ಮನವಾದಡೆ ನುಡಿಯನು.**
**ಕಾಣಿಯ ಸೋಲ, ಅರ್ಧಗಾಣಿಯ ಗೆಲ್ಲ**
**ಜಾಣ ನೋಡವ್ವಾ ನಮ್ಮ ಕೂಡಲಸಂಗಮದೇವ.**

ಎಂಬ ಬಸವವಾಣಿಯಂತೆ ನಿಷ್ಠುರ ಸಂಶೋಧನೆಯ ಅಂಗಡಿಯನ್ನಿಟ್ಟುಕೊಂಡು, ಏಕನಿಷ್ಠೆ, ಸತ್ಯ ಪ್ರತಿಪಾದನೆಗಳಿಗೆ ತಕ್ಷಣ ಕರಗಿ, ಅದಕ್ಕೆ ವಿರುದ್ಧವಾದುದಕ್ಕೆ 'ಕ್ಷತ್ರಿಯನು ಮುರಿದಾನೆ ಹೊರತು ಮಣಿಯುವುದಿಲ್ಲ'ವೆಂಬ ದೃಢತೆಯನ್ನು ಸಾರಿದ ಎಂ.ಎಂ. ಕಲಬುರ್ಗಿಯವರು ಕನ್ನಡ ಸಂಶೋಧನ ಕ್ಷೇತ್ರದ ಅಪರೂಪದ ಸಾಧಕರು; ಸಮಗ್ರ ಸಂಶೋಧಕರು. ಸೃಜನಶೀಲ ಕ್ಷೇತ್ರದಲ್ಲಿ ಬಹುಮುಖತೆಯು ಸಾಮಾನ್ಯವಾಗಿರುತ್ತದೆ. ಆದರೆ ಒಂದು ಶಾಸ್ತ್ರ ಕ್ಷೇತ್ರದಲ್ಲಿ ಪರಿಣಿತಿ ಕಷ್ಟಸಾಧ್ಯ. ಅಂತಹುದರಲ್ಲಿ ಕಲಬುರ್ಗಿಯವರು ಶಿವನಂತೆ ಅಷ್ಟಮೂರ್ತಿಗಳು. ಶಾಸನ, ಛಂದಸ್ಸು, ಹಸ್ತಪ್ರತಿ ಮತ್ತು ಗ್ರಂಥ ಸಂಪಾದನೆ, ಭಾಷೆ, ಜನಪದ ಸಾಹಿತ್ಯ, ಶಿಷ್ಟ ಸಾಹಿತ್ಯ, ಕನ್ನಡ ಸಂಸ್ಕೃತಿ ಮತ್ತು ಸಂಶೋಧನೆ ಎಂಬ ಎಂಟು ಕ್ಷೇತ್ರಗಳಲ್ಲಿ ಸಂಶೋಧನೆ. ಸಾಲದೆಂಬಂತೆ ನಾಟಕ, ಕವನ ಸಂಕಲನಗಳನ್ನೂ ರಚಿಸಿದ್ದಾರೆ. ಅವರ ಈ ಅಷ್ಟಮುಖಿ ಸಾಧನೆಗಳನ್ನು ಪರಾಮರ್ಶನಕ್ಕೆ ಒಳಪಡಿಸುವುದು ಈ ಲೇಖನದ ತಿರುಳಾಗಿದೆ.

## KEYWORDS:

ಸಂಸ್ಕೃತಿ, ಹಸ್ತಪ್ರತಿ, ಶಾಸನ, ವ್ಯಾಕರಣಾಂಶಗಳು, ಗ್ರಂಥಸಂಪಾದನೆ, ಭಾಷೆ, ವಿಮರ್ಶೆ.

## 1. ಶಾಸನ:

"ಚರಿತ್ರೆಯ ವಿಷಯದಲ್ಲಿ ನಮ್ಮ ಪ್ರಾಚೀನ ಕವಿಗಳು ತೋರಿದ ಅವಜ್ಞೆ, ಹಸ್ತಪ್ರತಿಗಳ ವಿಷಯದಲ್ಲಿ ನಮ್ಮ ಲಿಪಿಕಾರರು ಮಾಡಿದ ಅಪ್ರಾಮಾಣಿಕ ನಕಲು ಕಾರ್ಯಗಳು ಕನ್ನಡದ ಚಾರಿತ್ರಿಕ ಸಾಹಿತ್ಯಕ್ಕೆ ಒಂದು ದೊಡ್ಡ ಶಾಪವಾಗಿ ಪರಿಣಮಿಸಿವೆ. ಇವುಗಳಿಂದಾಗಿ ನಮ್ಮ ಇತಿಹಾಸ ಕವಿಗಳ ಕೃತಿಯಲ್ಲಿ, ನಮ್ಮ ಕೃತಿಗಳು ಲಿಪಿಕಾರರ ಕೈಯಲ್ಲಿ ತಮ್ಮ ಮೂಲಸ್ವರೂಪವನ್ನು ಹಾಳುಮಾಡಿಕೊಂಡವು. ಅದಕ್ಕಾಗಿ ನಮ್ಮ ಗತಕಾಲದ ಶುದ್ಧ ಇತಿಹಾಸವನ್ನರಿಯಲು ಪ್ರಾಚೀನ ಸಂಸ್ಕೃತಿಯ ಮೂಕಸಾಕ್ಷಿಗಳೆನಿಸಿದ ಶಾಸನಗಳ ಮೊರೆ ಹೋಗಬೇಕಾಗಿದೆ" ಎಂಬುದು ಕಲಬುರ್ಗಿಯವರ ನಿಲುವಾಗಿತ್ತು. ಕನ್ನಡ ಸಂಸ್ಕೃತಿ ಮತ್ತು ಪರಂಪರೆಯ ನೈಜ ಚರಿತ್ರೆಯನ್ನು ಅರಿಯಲು ಅವರು ಶಾಸನಗಳ ತಲಸ್ಪರ್ಶಿ ಅಧ್ಯಯನವನ್ನು ಕೈಗೊಂಡರು. ಅದರಲ್ಲೂ ಬಸವಣ್ಣನವರನ್ನು ಕುರಿತು ಕೆಲವು ಅಸಂಗತ ವಿಚಾರಗಳು ಚಾಲ್ತಿಯಲ್ಲಿದ್ದವು. "No epigraphic mention of Basava and Channabasava has

been obtained which is really peculiar, if they had the high office that is allotted to them by tradition'' (ಜೆ.ಎಫ್. ಫ್ಲೀಟ್) ಮತ್ತು ''ವೀರಶೈವ ಮತಸ್ಥಾಪಕರೆಂದು ಪ್ರಸಿದ್ಧರಾದ ಬಸವ ಚೆನ್ನಬಸವಾದಿಗಳು ಕ್ರಿ.ಶ. 1156–67ರಲ್ಲಿ ಆಳುತ್ತಿದ್ದ ಬಿಜ್ಜಳನ ಕಾಲದಲ್ಲಿದ್ದರೆಂದು ಸರ್ವತ್ರ ಪ್ರತೀತಿಯಿದ್ದು.. .. ಕರ್ನಾಟಕ ದೇಶದ ಶಾಸನಗಳಲ್ಲಿ ಇದಕ್ಕೆ ಯಾವ ವಿಧವಾದ ಆಧಾರವೂ ದೊರೆಯುವುದಿಲ್ಲ... ಅವರು ಕ್ರಿ.ಶ. 1156–67ರಲ್ಲಿ ಇರಲಿಲ್ಲವೆಂದಂತೂ ಸುಮಾರಾಗಿ ದೃಢವಾಗಿಯೇ ಹೇಳಬಹುದು'' (ಎ. ವೆಂಕಟಸುಬ್ಬಯ್ಯ) ಎಂಬ ಅವಾಸ್ತವಿಕ ವಿಚಾರಗಳಿಗೆ ಪ್ರತ್ಯುತ್ತರವಾಗಿ 'ಬಸವಣ್ಣನವರನ್ನು ಕುರಿತು ಶಾಸನಗಳು' ಎಂಬ ಕೃತಿಯಲ್ಲಿ ಬಸವಣ್ಣನವರ ಉಲ್ಲೇಖವಿರುವ 18 ಶಾಸನಗಳನ್ನು (ಮನಗೂಳಿ, ರಾಯಸೆಟ್ಟಿಪುರ, ಕಸಪಯ್ಯನ, ಓರುವಾಯಿ, ಅಬ್ಬಲೂರು, ಸೊರಟೂರ, ಬಳ್ಳಿಗಾವಿ, ಹಿರಿಯೂರ, ಅರ್ಜುನವಾಡ, ಚೌಡದಾನಪುರ 1, 2, ಕಲ್ಲೇದೇವರಪುರ, ಮರಡಿಪುರ, ಗುಡಿಹಾಳ ಕುಂಟೋಜಿ, ಆನಂದಪುರ ಮಠ, ಜೋಡಿದಾಸೇನಹಳ್ಳಿ, ಕಾನಕಾನಹಳ್ಳಿ 1, 2) ವಿಶ್ಲೇಷಿಸಿ, ಅಸಮ್ಮತ (ಮೊದಲ 7), ಸರ್ವ ಸಮ್ಮತ (ನಂತರದ 11)ವೆಂದು ವಿಭಾಗಿಸಿ ಸ್ಪಷ್ಟಪಡಿಸಿದ್ದಾರೆ. 'ಶಾಸನಗಳಲ್ಲಿ ಶಿವಶರಣರು' ಕೃತಿಯಲ್ಲಿ 132 ಶಾಸನಗಳಲ್ಲಿನ 90 ಜನ ಶಿವಶರಣರ ಇತಿವೃತ್ತ, ಕಾಲ, ಚರಿತ್ರೆಗಳ ವಿವೇಚನೆ ಮಾಡಿದ್ದಾರೆ. ಜೊತೆಗೆ ವಿಜಾಪುರ ಮತ್ತು ಧಾರವಾಡ ಜಿಲ್ಲೆಗಳ ಶಾಸನಗಳು/ಶಾಸನಸೂಚಿಗಳು, ಶಾಸನ ವ್ಯಾಸಂಗ–1, 2, ಸಮಾಧಿ–ಬಲಿದಾನ–ವೀರಮರಣ–ಸ್ಮಾರಕಗಳು, ಮಹಾರಾಷ್ಟ್ರದ ಕನ್ನಡ ಶಾಸನಗಳು ಮತ್ತು ಕನ್ನಡ ಶಾಸನ ಸಾಹಿತ್ಯ ಸೇರಿದಂತೆ 12 ಕೃತಿಗಳನ್ನು ರಚಿಸಿದ್ದಾರೆ.

ಹಲ್ಮಿಡಿ ಶಾಸನದ ಪ್ರೇಮಾಲಯ ಸುತನ್, ಕಪ್ಪೆ ಅರಭಟ್ಟನ್, ಗೇಸಾಸ, ಕೀಳ್ಗುಂಟೆ–ವೇಳೆವಾಳಿ–ಲೆಂಕವಾಳಿ–ಗರುಡ, ಚಿತ್ರದುರ್ಗದ ಪ್ರಾಚೀನ ಹೆಸರು ಸೇರಿದಂತೆ ಮಾರ್ಗ ಸಂಪುಟಗಳಲ್ಲಿನ 99 ಲೇಖನಗಳು ಶಾಸನ ಕ್ಷೇತ್ರಕ್ಕೆ ಸಂಬಂಧಿಸಿವೆ. ಇವುಗಳ ಪೈಕಿ 'ಚಿತ್ರದುರ್ಗದ ಪ್ರಾಚೀನ ಹೆಸರು' ಎಂಬ ಲೇಖನವು ವಿಶೇಷವಾಗಿದೆ. ಬಿ.ಎಲ್. ರೈಸ್, ಕೆ. ನರಸಿಂಹಾಚಾರ್, ಹುಲ್ಲೂರು ಶ್ರೀ ನಿವಾಸ ಜೋಯಿಸ ಮೊದಲಾದವರು ಶಾಸನಗಳಲ್ಲಿ ಚಿತ್ರದುರ್ಗದ ಪ್ರಾಚೀನ ಹೆಸರು 'ಬೆಮ್ಮತ್ತನಕಲ್ಲು' ಎಂದು ಅಭಿಪ್ರಾಯಪಟ್ಟಿದ್ದರು. ಆದರೆ ಕಲಬುರ್ಗಿಯವರು ಮಾರ್ಗ–2ರಲ್ಲಿ ''ಬೆಮ್ಮತ್ತನಕಲ್ಲು ಎಂಬುದು ತಪ್ಪು ಪಾಠ, ಅಲ್ಲಿ 'ಚಿಮ್ಮತ್ತನಕಲ್ಲು' ಆಗಿರಬಹುದು''(153) ಎಂದು ಹೇಳಿ, ಶಾಸನದಲ್ಲಿನ 'ಚಿ–ಬೆ' ವ್ಯತ್ಯಾಸಗಳನ್ನು ಸ್ಪಷ್ಟಪಡಿಸಿದ್ದಾರೆ. ಚಿತ್ರದುರ್ಗದ ಸಮೀಪ ಚಿಮ್ಮತ್ತನಕಲ್ಲು, ಸೂಳ್ಗಲ್ಲು, ಚಿತ್ತರಕಲ್ಲು ಎಂಬ ಹಳ್ಳಿಗಳಿದ್ದು ಕಾಲಾನಂತರದಲ್ಲಿ ಅವು ಬೆರೆತುಹೋಗಿರಬೇಕು. ಉಳಿದ ಹೆಸರುಗಳು ಕರಗಿ 'ಚಿತ್ತರಕಲ್ಲು' ಎಂಬುದೇ ಪ್ರಧಾನವಾಗಿ ಉಳಿದಿರಬೇಕು. ಕೋಟೆ ಕಟ್ಟಿದ ನಂತರ 'ಚಿತ್ತರಕಲ್ಲು+ದುರ್ಗ' ಎನಿಸಿಕೊಂಡಿತು. ಸರಳವಾಗಿ 'ಚಿತ್ರದುರ್ಗ' ರೂಪ ತಾಳಿತು ಎಂಬ ನಿರ್ಣಯಕ್ಕೆ ಬರುತ್ತಾರೆ. ಅದೇ ರೀತಿ ಸಿದ್ಧರಕಲ್ಲು>ಚಿತ್ತರಕಲ್ಲು>ಚಿತ್ತರಕಲ್ಲುದುರ್ಗ>ಚಿತ್ರದುರ್ಗ ಎಂದು ಅದರ ಶಬ್ದ ನಿಷ್ಪತ್ತಿಯನ್ನು ಸಾಂಸ್ಕೃತಿಕವಾಗಿ ಬಿಡಿಸಿ ವಿವರಿಸಿದ್ದಾರೆ.

**2. ಛಂದಸ್ಸು:**

ಕಲಬುರ್ಗಿಯವರು ರಸಭಾವ, ನಾದ ಮತ್ತು ಲಯದ ನೆಲೆಯಲ್ಲಿ ಛಂದೋಲಯವನ್ನು ವಿಶ್ಲೇಷಿಸುತ್ತಾರೆ. ಕಾವ್ಯ, ಶಾಸನಗಳನ್ನು ಅರ್ಥಮಾಡಿಕೊಳ್ಳಲು ಛಂದಸ್ಸು ಹೇಗೆ ನೆರವಾಗುತ್ತದೆ ಎಂಬುದು ಅವರ ಆದ್ಯತೆಯಾಗಿತ್ತು. ಈ ಹಿನ್ನೆಲೆಯಲ್ಲಿ ದೇಸಿ ಛಂದಸ್ಸು ಮತ್ತು ಶಾಸನ ಛಂದಸ್ಸುಗಳನ್ನು ಅವರು ವಿಶೇಷವಾಗಿ ಪರಿಶೀಲಿಸಿದ್ದಾರೆ.

ಅಂಶಗಣದ ಇತಿಹಾಸ, ಷಟ್ಪದಿಯ ಉಗಮ–ವಿಕಾಸ, ಉಯ್ಯಾಲಗಣ ಯಾವುದು? ತರಂಗಗಣ ಸೂಕ್ತ ಹೆಸರು, ಪ್ರಾಚೀನ ಕನ್ನಡ ಸಾಹಿತ್ಯ ಸಂವಹನ: ಪಾತಳಿ ಪಲ್ಲಟ, ಪ್ರಾಚೀನ ಕನ್ನಡದ ಒಂದು ಉಚ್ಚಾರ, ಮಾನಸೋಲ್ಲಾಸದಲ್ಲಿ ಕನ್ನಡ ಪದಗಳು, ತೀನಂಶ್ರೀ ಛಂದೋವಿಚಾರ: ಪರಿಶೀಲನೆ, ಕುವೆಂಪು ಛಂದಸ್ಸು, ಎಪ್ಪತ್ತರ ಬೇಂದ್ರೆ ಮೊದಲಾದ ಲೇಖನಗಳ ಮೂಲಕ ಛಂದೋಮೀಮಾಂಸೆಯನ್ನು ಮಾಡಿದ್ದಾರೆ.

ಡಿ.ಎಲ್.ಎನ್. ಅವರು ತಮ್ಮ 'ಮಾನಸೋಲ್ಲಾಸದಲ್ಲಿ ಛಂದಸ್ಸು' ಲೇಖನದಲ್ಲಿ ಆ ಕೃತಿಯಲ್ಲಿ ನಿರೂಪಿತವಾಗಿರುವ ಕನ್ನಡದ ಮಟ್ಟುಗಳಾದ ತ್ರಿಪದಿ, ಕಂದ, ಷಟ್ಪದಿ ಸೇರಿದಂತೆ ಒಟ್ಟು 13 ಪದ್ಯಗಳನ್ನು ಗುರುತಿಸಿ, ಸಂಸ್ಕರಿಸಿದ್ದರು. ಕಲಬುರ್ಗಿಯವರು 'ಮಾನಸೋಲ್ಲಾಸದಲ್ಲಿ ಕನ್ನಡ ಪದಗಳು' ಲೇಖನದಲ್ಲಿ ಡಿ.ಎಲ್.ಎನ್. ಅವರ ಗಮನಕ್ಕೆ ಬಾರದ ಚತುಷ್ಪದಿ ಮತ್ತು ವಿಚಿತ್ರಾ ತ್ರಿಪದಿಗಳನ್ನು ಗುರುತಿಸಿ, ಸಂಸ್ಕರಿಸಿದ್ದಾರೆ. ಆದರೂ "ನಾನು ಮಾಡಿದ ಸಂಸ್ಕರಣ ಕಾರ್ಯ ಅಷ್ಟೇನೂ ತೃಪ್ತಿಕರವಾಗಿಲ್ಲವೆಂದು ನನ್ನ ಸ್ಪಷ್ಟ ನಂಬಿಕೆ. ಅದಕ್ಕಾಗಿ ಛಂದೋಜ್ಞಾನಿಗಳು, ಪರಿಷ್ಕರಣ ಪರಿಣತರು ಈ ಪದ್ಯಗಳತ್ತ ಗಮನ ಕೊಡಬೇಕಾಗಿದೆ... ಮಾನಸೋಲ್ಲಾಸದಲ್ಲಿ ಇನ್ನೂ ಹಲವು ಕನ್ನಡ ಪದ್ಯಗಳಿರಬಹುದೆನಿಸುತ್ತದೆ. ವಿದ್ವಾಂಸರು ಈ ಗ್ರಂಥವನ್ನು ಆಮೂಲಾಗ್ರವಾಗಿ ಅಭ್ಯಾಸಕ್ಕೆ ಅಳವಡಿಸಿಕೊಳ್ಳಬೇಕು" ಎಂಬ ವಿನಯವಂತಿಕೆಯನ್ನು, ಅಧ್ಯಯನ ಸಾಧ್ಯತೆಗಳನ್ನು ಸೂಚಿಸಿದ್ದಾರೆ.

ಶಾಸನಗಳ ಛಂದಸ್ಸಿನ ಅಧ್ಯಯನ ಕಠಿಣವಾದುದು. ಶಾಸನ ಪದ್ಯಗಳನ್ನು ಗದ್ಯದಂತೆ ಉದ್ದ ಸಾಲುಗಳಲ್ಲಿ ಬರೆಯಲಾಗಿರುತ್ತದೆ. ಜೊತೆಗೆ ಭಾಷಾದೋಷ, ಪಾಠಗಳ ಸವಕಳಿಗಳನ್ನು ಪರಿಷ್ಕರಿಸಿ, ಛಂದಸ್ಸನ್ನು ಗುರುತಿಸುವುದು ತುಂಬ ಕಷ್ಟದ ಕೆಲಸ. ಕಲಬುರ್ಗಿಯವರು ಶಾಸನ ಪಾಠಗಳನ್ನು ಯಶಸ್ವಿಯಾಗಿ ಸಂಸ್ಕರಿಸಿದ್ದಾರೆ. ಶಾಸನ ಛಂದಸ್ಸು, ಶಾಸನಗಳಲ್ಲಿ ಭಾಮಿನಿ, ಶಾಸನಗಳಲ್ಲಿ ಇನ್ನಷ್ಟು ಅಂಶವೃತ್ತ–ಮಾತ್ರಾ ವೃತ್ತಗಳು ಎಂಬ ಲೇಖನಗಳ ಮೂಲಕ ಹೊಸ ಅಂಶಗಳನ್ನು ಬಯಲಿಗೆಳೆದಿದ್ದಾರೆ. ಕೊಪ್ಪಳದ ಶಾಸನದಲ್ಲಿ (ಹರಿಹರನಿಗಿಂತ ಪ್ರಾಚೀನ–ಕ್ರಿ.ಶ. 1100) ಲಲಿತ ರಗಳೆಯ ಪಾಠವನ್ನು ಗುರುತಿಸಿದ್ದಾರೆ. ಯಾಳವಾರ ಶಾಸನದಲ್ಲಿ (1557) ಮಾತ್ರಾಘಟಿತ ಭಾಮಿನಿಲಯವನ್ನು ಹಾಗೂ ದೇವದುರ್ಗ ಶಾಸನದಲ್ಲಿ (1690) ಮಾತ್ರಾಘಟಿತ ಮೂರು ವಾರ್ಧಕ ಷಟ್ಪದಿಗಳನ್ನು ಗುರುತಿಸಿದ್ದಾರೆ. ಇದೇ ರೀತಿ ಹಲವು ಶಾಸನಗಳನ್ನು ಪರಿಶೀಲಿಸಿ ಏಳೆ, ತ್ರಿಪದಿ (12–34), ಪಿರಿಯಕ್ಕರ (16–18), ಮೂಲ ಷಟ್ಪದಿ (47 ಈ), ಉತ್ಸಾಹ (1) ಇವುಗಳ ಛಂದಸ್ಸಿನ ಸಾಮಾನ್ಯ ಲಕ್ಷಣಗಳನ್ನು ವಿವೇಚಿಸಿದ್ದಾರೆ.

**3. ಹಸ್ತಪ್ರತಿ ಮತ್ತು ಗ್ರಂಥ ಸಂಪಾದನೆ:**

ಹಸ್ತಪ್ರತಿ–ಗ್ರಂಥಸಂಪಾದನ ಕ್ಷೇತ್ರದಲ್ಲಿ ಕಲಬುರ್ಗಿ ಅವರ ಸಾಧನೆ ವ್ಯಾಪಕವಾದುದು. ಅವರು 'ಕನ್ನಡ ಹಸ್ತಪ್ರತಿಶಾಸ್ತ್ರ' ಮತ್ತು 'ಕನ್ನಡ ಗ್ರಂಥಸಂಪಾದನಶಾಸ್ತ್ರ' ಎಂಬ ಎರಡು ಮೌಲಿಕವಾದ ತಾತ್ವಿಕ ಕೃತಿಗಳನ್ನು ರಚಿಸಿದ್ದಾರೆ. 'ಕನ್ನಡ ಹಸ್ತಪ್ರತಿಶಾಸ್ತ್ರ'ದಲ್ಲಿ ಹಸ್ತಪ್ರತಿಗಳ ಅರ್ಥ, ಸ್ವರೂಪ, ಕೃತಿ–ಕಟ್ಟು–ಪ್ರತಿ, ಹಸ್ತಪ್ರತಿ ಸಂಗ್ರಹ, ಲೇಖನ ಸಾಮಗ್ರಿಗಳು, ಹಸ್ತಪ್ರತಿ ಸಂಕಲನ ಸೇರಿದಂತೆ ಹಲವು ಅಂಶಗಳನ್ನು ಕೂಲಂಕಷವಾಗಿ, ಸೋದಾಹರಣವಾಗಿ ನಿರೂಪಿಸಿದ್ದಾರೆ. ಅದೇ ರೀತಿ 'ಕನ್ನಡ ಗ್ರಂಥಸಂಪಾದನಶಾಸ್ತ್ರ'ದಲ್ಲಿ ಇತಿಹಾಸ ಕಾಂಡ, ಲೇಖನ ಕಾಂಡ, ಸ್ಖಾಲಿತ್ಯ ಕಾಂಡ, ಸಂಪಾದನ ಕಾಂಡ, ಹಸ್ತಪ್ರತಿ ಕಾಂಡ ಮತ್ತು ಶೇಷ ಕಾಂಡ ಎಂಬ ಆರು ಅಧ್ಯಾಯಗಳಲ್ಲಿ ಗ್ರಂಥಸಂಪಾದನೆಯ ಅರ್ಥ, ಸ್ವರೂಪ, ಪಾಠ ಪರಿಷ್ಕರಣ, ಹಸ್ತಪ್ರತಿ ಸಂಗ್ರಹ ಕಾರ್ಯದ ವಿವರಗಳನ್ನು ಚರ್ಚಿಸಿದ್ದಾರೆ. ಈ ಮುಂಚೆ ಗ್ರಂಥಸಂಪಾದನೆ ಕುರಿತು

ಡಿ.ಎಲ್.ಎನ್. ಸಂಕ್ಷಿಪ್ತ ಕೃತಿ ರಚಿಸಿದ್ದರು. ಕಲಬುರ್ಗಿಯವರು ಅದನ್ನು ಹೆಚ್ಚಿನ ಉದಾಹರಣೆಗಳ ಮೂಲಕ ವ್ಯಾಪಕವಾದ ಚರ್ಚೆಯನ್ನು ಬೆಳೆಸಿದರು. ಈ ಎರಡೂ ಕೃತಿಗಳು ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ ಕ್ಷೇತ್ರದಲ್ಲಿ ವ್ಯಾಸಂಗ ಮಾಡುವವರಿಗೆ ಇಂದಿಗೂ ಕೈದೀವಿಗೆಗಳಾಗಿವೆ. ಅವರ ಹಸ್ತಪ್ರತಿ ಸಂಗ್ರಹ–ಸಂಪಾದನೆಯ ಕಾರ್ಯಗಳನ್ನು ಐದು ರೀತಿಯಲ್ಲಿ ವಿಂಗಡಿಸಬಹುದು:

1. ಪ್ರಾಚೀನ ಹಸ್ತಪ್ರತಿಗಳು: ಮಲ್ಲಿನಾಥ ಪುರಾಣ, ಶಬ್ದಮಣಿದರ್ಪಣ ಸಂಗ್ರಹ
2. ವಚನ ಸಾಹಿತ್ಯದ ಹಸ್ತಪ್ರತಿಗಳು: ಬಸವಣ್ಣನವರ ಟೀಕಿನ ವಚನಗಳು, ಬಸವಣ್ಣನವರ ವಚನಗಳು, ಪರಮಾನುಸುಧೆ, ಏಕೋತ್ತರಸ್ಥಲ, ಕೊಂಡಗುಳಿ ಕೇಶಿರಾಜನ ಕೃತಿಗಳು
3. ಚಾರಿತ್ರಿಕ ಹಸ್ತಪ್ರತಿಗಳು: ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ಸಿರುಮನ ಸಾಂಗತ್ಯಗಳು, ಕುಮಾರರಾಮನ ಸಾಂಗತ್ಯಗಳು, ನಿಂಬಸಾಮಂತ ಚರಿತೆ – ಚರಿತ್ರೆ ಅಧ್ಯಯನಕ್ಕೆ ಮೌಲಿಕ ಆಕರಗಳಾಗಿವೆ.
4. ಸಾಂಸ್ಕೃತಿಕ ಹಸ್ತಪ್ರತಿಗಳು: ತಗರಪವಾಡ, ಸಿದ್ಧಮಂಕಚರಿತೆ – ಹಾಲುಮತ ಸಮಾಜ, ಸಂಸ್ಕೃತಿಯ ಅಧ್ಯಯನಕ್ಕೆ ವಿಶಿಷ್ಟ ಕೊಡುಗೆಗಳಾಗಿವೆ.
5. ಸಮಗ್ರ ಗ್ರಂಥಸಂಪಾದನೆ: ಕರ್ನಾಟಕ ಕೈಫಿಯತ್ತುಗಳು, ಹರಿಹರನ ರಗಳೆಗಳು

ಕಲಬುರ್ಗಿಯವರು ತಮ್ಮ ಎಲ್ಲಾ ಸಂಪಾದನೆಗಳಿಗೆ ಅಭ್ಯಾಸಪೂರ್ಣ ಪ್ರಸ್ತಾವನೆಗಳನ್ನು ಬರೆದಿದ್ದು, ಅವು ಉನ್ನತ ವಿಮರ್ಶೆಗೆ ಉತ್ತಮ ಮಾದರಿಗಳೂ ಆಗಿವೆ. ಹಸ್ತಪ್ರತಿ ಕ್ಷೇತ್ರಕಾರ್ಯ ವಿಧಾನ–ಸಾಧನೆ, ಕನ್ನಡದಲ್ಲಿ ಗ್ರಂಥಸಂಪಾದನೆಯ ಸಾಧನೆ, ವಚನ ಸಾಹಿತ್ಯ ಸಂಪಾದನೆ ವಿಧಾನ–ಇತಿಹಾಸ, ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಂಡಾರ – ಲೇಖನಗಳ ಮೂಲಕ ಈ ಕ್ಷೇತ್ರಕ್ಕೆ ಹೊಸ ಚೈತನ್ಯವನ್ನು ತುಂಬಿದರು. ಇದರೊಂದಿಗೆ ಪ್ರಾಚೀನ ಕಾವ್ಯಗಳ ಪಾಠಪರಿಷ್ಕರಣದಲ್ಲಿ ಕಲಬುರ್ಗಿಯವರು ಪ್ರಮುಖ ಪಾತ್ರವಹಿಸಿದರು. ರನ್ನನ ಸಾಹಸಭೀಮ ವಿಜಯದ ಒಂದು ಪದ್ಯದ ಅರ್ಥ ಸಮಸ್ಯೆಯನ್ನು ಅವರು ಬಿಡಿಸಲು ಪ್ರಯತ್ನಿಸಿದ ರೀತಿ ಸ್ವಾರಸ್ಯಕರವಾಗಿದೆ. 'ಪಸವಿನೊಳನ್ನಮಂ ಸುಫಲದಲ್ಲಿ ಸುವರ್ಣಮನೀವ' (ಕಲಬುರ್ಗಿಯ ಅವರ ಶೋಧಗಳು, ಪು.78) ಎಂಬ ಪದ್ಯವನ್ನು ಅವರು 'ಪಸಿವಿನೊಳನ್ನಮಂ' ಎಂದು ಹೇಳಿ, 'ಹಸಿವಿನಲ್ಲಿ ಅನ್ನವನ್ನು ನೀಡುವುದು' ಎಂಬ ಅರ್ಥವನ್ನು ಕೊಟ್ಟಿದ್ದಾರೆ. ಚಿದಾನಂದಮೂರ್ತಿಯವರು ಅದು 'ಪಸಿವು' ಅಲ್ಲ, 'ಪಸವು' ಎಂದು ಪಾಠವನ್ನು ನೀಡಿದರು. ಅಂದರೆ ಅದರರ್ಥ 'ಬರಗಾಲ' ಎಂದಾಗುತ್ತದೆ. ಕಲಬುರ್ಗಿಯವರು ಸವಿನಯದಿಂದ ತಮ್ಮ ಪಾಠವನ್ನು ತಿದ್ದಿಕೊಂಡು ಸಹಮತ ವ್ಯಕ್ತಪಡಿಸಿದರು. ಇದು ವಿದ್ವತ್ತಿನೊಂದಿಗೆ ಅವರಲ್ಲಿನ ವಿನಯವನ್ನು ಸೂಚಿಸುತ್ತದೆ.

**4. ಭಾಷೆ:**

ಪದವಿ ಮೊದಲ ವರ್ಷದ ವಿದ್ಯಾರ್ಥಿಯಾಗಿದ್ದಾಗ 'ಭೇದ' ಪದದಲ್ಲಿ ಯಾವ ಅಕ್ಷರ ಮಹಾಪ್ರಾಣ? ಗೊಂದಲ! ಸ್ಪಷ್ಟನೆಗಾಗಿ ಗುರುಗಳನ್ನು ಕೇಳುವುದೆಂದರೆ ಅಜ್ಞಾನ ಪ್ರದರ್ಶನ. ಅಂತೂ ಕೇಳಿದಾಗ ಬಿ.ಟಿ. ಸಾಸನೂರ ಅವರು ಅಜ್ಞಾನವನ್ನು ಕಾಣದೆ, ಜಿಜ್ಞಾಸೆಯನ್ನು ಗುರುತಿಸಿದರು. ''ಇದು ಬಹಳ ಜನರನ್ನು ಕಾಡುವ ಶಬ್ದ. ಯಾವುದೇ ಶಬ್ದದ ನಿಜರೂಪ ತಿಳಿಯಲು ನಿಷ್ಪತ್ತಿಯ ಬಗ್ಗೆ ವಿಚಾರಿಸಬೇಕು. ಭೇದ ಇದರ ಪ್ರಕೃತಿ 'ಭಿದ್', ಇಷ್ಟು ಗೊತ್ತಿದ್ದರೆ ಸಾಕು ಭೇದ, ಪ್ರಭೇದ, ಅಭೇದ, ವಿಭೇದ, ಭೇದಾಭೇದ ಇತ್ಯಾದಿಗಳನ್ನೆಲ್ಲ ಸರಿಯಾಗಿ

ಬರೆಯಬಹುದು". 'ಶಬ್ದಮಣಿದರ್ಪಣ' ಪಾಠದ ಕೊನೆಯ ದಿನ ಸಾಸನೂರ ಅವರು ವಿದ್ಯಾರ್ಥಿಗಳಿಗೆ 'ನಿಮ್ಮ ಜೀವನದ ಗುರಿ ಏನು' ಎಂದು ಕೇಳಿದಾಗ ಕಲಬುರ್ಗಿಯವರು "ಶಬ್ದಮಣಿದರ್ಪಣವನ್ನು ಕಲಿಸುವುದು" ಎಂದು ಹೇಳಿದ್ದರಂತೆ! ಅಂದು ಹೇಳಿದಂತೆ ಅದನ್ನು ಪಾಠ ಮಾಡಿದ್ದು ಮಾತ್ರವಲ್ಲದೆ ಗುರುಗಳೊಂದಿಗೆ ಸೇರಿ ಶಬ್ದಮಣಿದರ್ಪಣವನ್ನು ಸಂಪಾದಿಸಿದರು.

ವಚನಕಾರರು: ಕನ್ನಡ ಭಾಷೆ-ವಚನ ಭಾಷೆ ಎಂಬ ಕೃತಿಯಲ್ಲಿ 'ಭಾಷೆಯನ್ನು ಮಾಲಿನ್ಯದಿಂದ ಮುಕ್ತಗೊಳಿಸುವುದು ಮತ್ತು ಅದನ್ನು ಸಾಮಾಜಿಕ ನ್ಯಾಯಕ್ಕಾಗಿ ಬಳಸುವುದು ಶರಣರ ಭಾಷಾ ನೀತಿ'ಯಾಗಿತ್ತು ಎಂಬುದನ್ನು ನಿದರ್ಶನಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. "ಎತ್ತಣ ಮಾಮರ, ಎತ್ತಣ ಕೋಗಿಲೆ, ಎತ್ತಣಿಂದೆತ್ತ ಸಂಬಂಧವಯ್ಯ?!" ಎಂಬ ವಚನದ ಸಾಲು ಪ್ರಶ್ನಾರ್ಥಕ ಚಿಹ್ನೆಯಿಟ್ಟರೆ ಒಂದು ಅರ್ಥ, ಉದ್ಗಾರ ಚಿಹ್ನೆಯಿಟ್ಟರೆ ಇನ್ನೊಂದು ಅರ್ಥ. ವಚನಗಳಲ್ಲಿ ಏಕತಾನತೆಯನ್ನು ಮುರಿಯುವುದಕ್ಕಾಗಿ ಹಲವಾರು ತಂತ್ರಗಳು ಬಳಕೆಯಾಗಿವೆ. ಆತ್ಮೀಯ ಸಂಭಾಷಣೆ, ಪ್ರಶ್ನೋತ್ತರಗಳ ವಿಧಾನ, ಬರಿಯ ಪ್ರಶ್ನೆಗಳನ್ನು ಹಾಕುತ್ತ ಉತ್ತರಗಳನ್ನು ಧ್ವನಿಸುವ ಬಗೆ, ಎಲವೋ, ಅಯ್ಯಾ, ಅಣ್ಣಗಳಿರಾ, ನೋಡಾ, ಅಯ್ಯೋ, ಭೋ ಮೊದಲಾದ ಸಂಬೋಧನಾ ರೂಪಗಳ ಬಳಕೆ, ಸಹಜವಾಗಿ ಬರುವ ಪ್ರಾಸ, ಗಾದೆ, ನುಡಿಗಟ್ಟುಗಳು, ಶಬ್ದಗಳ ಪುನರುಕ್ತಿ ತಂತ್ರ, ಶ್ಲೇಷೆ, ಸ್ವಭಾವೋಕ್ತಿ ಬಳಕೆ – ಇವು ವಚನ ಭಾಷೆಯ ವೈಶಿಷ್ಟ್ಯಗಳಾಗಿದ್ದವು ಎಂಬುದನ್ನು ಪ್ರತಿಪಾದಿಸಿದ್ದಾರೆ.

ಕನ್ನಡ ನಾಮ ವಿಜ್ಞಾನಕ್ಕೆ ಕಲಬುರ್ಗಿಯವರ ಕೊಡುಗೆ ಅನನ್ಯವಾದುದು. 'ಹೆಸರಲ್ಲೇನಿದೆ? ಗುಲಾಬಿಯನ್ನು ಯಾವ ಹೆಸರಿನಿಂದ ಕರೆದರೂ ಗುಲಾಬಿಯೇ' ಎಂದು ಕವಿ (ಶೇಕ್ಸ್‌ಪಿಯರ್) ಹೇಳಿದರೆ ಕಲಬುರ್ಗಿಯವರು 'ಹೆಸರಿನಲ್ಲಿ ಎಲ್ಲಾ ಇದೆ' (ಇತಿಹಾಸ, ಸಂಸ್ಕೃತಿ, ಪರಂಪರೆ, ವ್ಯಕ್ತಿತ್ವ, ಮನೋಭಾವ, ವೃತ್ತಿ ) ಎನ್ನುತ್ತಾರೆ. ಒಂದು ಹೆಸರಿನ ಸುತ್ತಲೂ ಇರುವ ಮಾಹಿತಿಯನ್ನು ಕಲೆಹಾಕುವಾಗ ಶಾಸನ, ಜಾನಪದ, ಗಾದೆ, ಪಡೆನುಡಿ ಇವುಗಳ ಮೂಲಕ ಸ್ಪಷ್ಟ ನಿಲುವಿಗೆ ಬರುತ್ತಾರೆ. ಅಂತರಶಿಸ್ತೀಯ ಅಧ್ಯಯನದ ಮೂಲಕ ಅವರ ನಾಮ ವ್ಯಾಸಂಗವು ಸಾಗುತ್ತದೆ. ಭೈರವ, ಜುಂಜಪ್ಪ, ಮೈಲಾರ, ಬೂದುಗ, ವಿರೂಪಾಕ್ಷಿ, ಹರಿಹರ, ಎಲ್ಲಮ್ಮ, ಅರಿಕೇಸರಿ ಇಂತಹ ವ್ಯಕ್ತಿನಾಮಗಳು, ಬನವಾಸಿ, ಧಾರವಾಡ, ಚಿತ್ರದುರ್ಗ, ಪುಣೆ ಇಂತಹ ಗ್ರಾಮನಾಮಗಳನ್ನು, ವಾದರ, ಕತ್ತಿಶೆಟ್ಟಿ, ಪಟ್ಟಣಶೆಟ್ಟಿ, ಕಂಬಳಿ ಇಂತಹ ಕುಟುಂಬನಾಮಗಳನ್ನು ಬಹುಆಯಾಮದಿಂದ ವಿಶ್ಲೇಷಿಸುತ್ತಾರೆ.

**5. ಜನಪದ ಸಾಹಿತ್ಯ:**

'ಉತ್ತರ ಕರ್ನಾಟಕದ ಜನಪದ ಪದ್ಯ ಸಾಹಿತ್ಯ' ಎಂಬ ಕೃತಿಯಲ್ಲಿ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಎಲ್ಲ ಪದ್ಯ ಪ್ರಕಾರಗಳನ್ನು ಸಂಗ್ರಹಿಸಿ, ಗಂಡಸರ ಹಾಡುಗಳು, ಹೆಂಗಸರ ಹಾಡುಗಳು ಮತ್ತು ಮಕ್ಕಳ ಹಾಡುಗಳು ಎಂದು ಶಾಸ್ತ್ರೀಯ ಹಿನ್ನೆಲೆಯಲ್ಲಿ ವರ್ಗೀಕರಿಸಿದ್ದಾರೆ. ಆಯಾ ಹಾಡುಗಳ ಸ್ವರೂಪ, ಉದಾಹರಣೆ ಮತ್ತು ಹಾಡುಗಳ ಸಾಂಸ್ಕೃತಿಕ ಮಹತ್ವವನ್ನು ನಿರೂಪಿಸಿದ್ದಾರೆ. ಜನಪದ ಪದ್ಯ ಸಾಹಿತ್ಯ ಅಭ್ಯಾಸಿಗಳಿಗೆ ಈ ಕೃತಿಯು ಪ್ರಮುಖ ಆಕರವಾಗಿದೆ. ಇದರೊಂದಿಗೆ ಮಾರ್ಗ ಸಂಪುಟ-2ರ 'ಜಾನಪದ ಮಾರ್ಗ'ದಲ್ಲಿ 27 ಸಂಶೋಧನ ಲೇಖನಗಳಿವೆ. ಇವುಗಳನ್ನು ಪ್ರಾಚೀನ ಸಾಹಿತ್ಯದಲ್ಲಿ ಜಾನಪದ ದೇವತೆಗಳು, ಜಾನಪದ ರಂಗಭೂಮಿ ಮತ್ತು ಜಾನಪದ ಸಾಹಿತ್ಯದ ತಾತ್ವಿಕತೆ ಎಂಬ ಮೂರು ವಿಭಾಗಗಳಲ್ಲಿ ವರ್ಗೀಕರಿಸಬಹುದು.

'ಸಮಗಾರ ದೇವರಿಗೆ ಮಚ್ಚೆಪೆಟ್ಟು' ಎಂಬ ಗಾದೆಯು ಕಲಬುರ್ಗಿಯವರ ಮನಸ್ಸಿನಲ್ಲಿ ಸುಳಿದಾಗ ಅವರ ಮನಸ್ಸು ಪ್ರಾಚೀನ ಕಾವ್ಯ, ಶಾಸನಗಳ ಕಡೆಗೆ ವಾಲುತ್ತದೆ. ಹಿಂದೆ ದುಡ್ಡುಕೊಟ್ಟು ಬೈಯಿಸಿಕೊಳ್ಳುತ್ತಿದ್ದರು. ತಾಮಸಗುಣ ಹೋಗಲಾಡಿಸಲು ಬೈಗುಳಗಳ ಪಾತ್ರ ಹಿರಿದು. ಆ ಬೈಗುಳದ ಗಾದೆ ಒಂದು ಪೂಜಾ ವಿಧಾನದ ಪಳೆಯುಳಿಕೆ ಆಗಿರಬೇಕೆಂದು ನಿರ್ಣಯಿಸುತ್ತಾರೆ. "ಸಾಹಿತ್ಯವು ಜನಮನವನ್ನು ಅರಳಿಸಬೇಕೆ ಹೊರತು ಕೆರಳಿಸಬಾರದು. ಅದು ವೈಯಕ್ತಿಕತೆಯಿಂದ ಸಾರ್ವತ್ರಿಕತೆಯೆಡೆಗೆ ಸಾಗಬೇಕೆ ಹೊರತು ಸಾರ್ವತ್ರಿಕತೆಯಿಂದ ವೈಯಕ್ತಿಕ ಚಾರಿತ್ರ್ಯಹನನಕ್ಕೆ ಬರಬಾರದು" ಎಂಬ ಖಚಿತ ನಿಲುವಿನ ಕಲಬುರ್ಗಿಯವರು ಜನಪದ ಸಾಹಿತ್ಯದಲ್ಲಾಗಿರುವ ತಪ್ಪು ತಿದ್ದಲು 'ಖರೆ ಖರೆ ಸಂಗ್ಯಾಬಾಳ್ಯಾ'ವನ್ನು ರಚಿಸಿದರು.

6. ಶಿಷ್ಟ ಸಾಹಿತ್ಯ:

ಸಾಮಾನ್ಯವಾಗಿ ಶಾಸ್ತ್ರ ವಿಷಯಗಳ ಬೋಧನೆ/ಬರವಣಿಗೆ ನೀರಸ; ಜನಪ್ರಿಯವಲ್ಲ. ಆದರೆ ಶಾಸ್ತ್ರವನ್ನು ಕಾವ್ಯಾಸಕ್ತಿಯಿಂದ ಕೇಳುವಂತೆ, ಕಾವ್ಯವನ್ನು ಮೈತುಂಬ ಕಿವಿಯಾಗಿ ಕೇಳುವಂತೆ ಬೋಧಿಸುವ ಕಲೆ ಕಲಬುರಗಿಯವರಿಗೆ ಕರಗತವಾಗಿತ್ತು. ಅವರು ಸಾಮಾನ್ಯವಾಗಿ ಶಾಸ್ತ್ರ ಸಾಹಿತ್ಯ, ಶಾಸನ ಸಾಹಿತ್ಯ, ಹಳಗನ್ನಡ, ನಡುಗನ್ನಡ ವಿಷಯಗಳನ್ನೇ ಪಾಠಮಾಡುತ್ತಿದ್ದರು. ಸಂಶೋಧನಶಾಸ್ತ್ರ, ಛಂದಸ್ಸು, ವ್ಯಾಕರಣ, ಗ್ರಂಥಸಂಪಾದನೆಯಂತಹ ನೀರಸ ವಿಷಯಗಳನ್ನೂ ಭಾವುಕ ನೆಲೆಯಿಂದ ಬೋಧಿಸುತ್ತಿದ್ದರು. "ಭಾಷೆ ಹಿಂದೆ ಸರಿದು ಭಾವ ಮುಂದೆ ಬರಬೇಕು" ಎಂಬುದು ಅವರ ಪ್ರಜ್ಞಾಪೂರ್ವಕ ನಿಲುವಾಗಿತ್ತು.

1. ಹಳಗನ್ನಡ: 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ'ವು ಅವರ ಪಿಎಚ್.ಡಿ. ಮಹಾಪ್ರಬಂಧದಲ್ಲಿ ಧವಳಹಾಡು, ಅಂಟಿಸುಂಟಿ, ಜೋಕುಮಾರನ ಹಾಡು, ಬೀರನ ಕತೆ, ತಾರೆವ ಹಾಡು, ಅಣಿಪೀಣೀ ಮೊದಲಾದ ಪಂಪಪೂರ್ವ ಯುಗದ ಜನಪದ ಹಾಡುಗಳನ್ನು ಗುರುತಿಸಿದ್ದಾರೆ. ನಾಡು-ನಾಡವರು, ಕವಿರಾಜಮಾರ್ಗೋಕ್ತ ಕವಿಗಳು, ಶಾಸನ ಸಾಹಿತ್ಯ-ಶಾಸನ ಕವಿಗಳು, ವಡ್ಡಾರಾಧನೆಯ ನಿಜವಾದ ಹೆಸರು 'ಆರಾಧನಾ ಕರ್ಣಾಟ ಟೀಕಾ' ಎಂದೂ, ಅದರ ಕರ್ತೃ 'ಬ್ರಾಜಿಷ್ಣು' ಎಂಬ ಹೊಸ ಸಂಗತಿಗಳನ್ನು ಸ್ಪಷ್ಟಪಡಿಸಿದ್ದಾರೆ. ಪಂಪನ ಪರಿಸರ, ಪಂಪನ ಧರ್ಮಪುರ: ಕ್ಷೇತ್ರಕಾರ್ಯ, ಪಂಪನ ಐತಿಹಾಸಿಕ-ಧಾರ್ಮಿಕ ಹಿನ್ನೆಲೆ, ಪಂಪನ ತಮ್ಮ ಜಿನವಲ್ಲಭ, ಪಂಪಭಾರತದಲ್ಲಿ ಮಂಗಲ ಪದ್ಯ, ಪಂಪಭಾರತ ಒಂದು ನಂಬಿಕೆ-ಒಂದು ಮೌಲ್ಯ, ಪಂಪಭಾರತದಲ್ಲಿ ವೀರರ ಮರಣಚಿತ್ರ, ಪಂಪಯುಗದ ವ್ಯಾಪ್ತಿ: ಒಂದು ಅಧ್ಯಯನ – ಈ ಲೇಖನಗಳು ಪಂಪನನ್ನು ಕುರಿತು ಅಧ್ಯಯನ ಮಾಡುವವರು ನೋಡಲೇಬೇಕಾದ ಬರಹಗಳು.

ಪಾಠ ಪರಿಷ್ಕರಣೆ ದೃಷ್ಟಿಯಿಂದ 'ಗದಾಯುದ್ಧದ ಒಂದು ಪದ್ಯ', 'ರನ್ನನ ಒಂದು ಪದ್ಯದ ಅರ್ಥ ಸಮಸ್ಯೆ' ಲೇಖನಗಳು ವಿದ್ವಾಂಸರ ಗಮನ ಸೆಳೆದಿವೆ. ಅದೇ ರೀತಿ 'ಕನ್ನಡ ಕಾವ್ಯಗಳಲ್ಲಿ ವೀರಮರಣ-ವೀರಸ್ವರ್ಗಾರೋಹಣ', 'ನಾಗವರ್ಮನು ಜನ್ನನ ಗುರುವಲ್ಲ', 'ಆತ್ಮಬಲಿದಾನ: ಬ್ರಹ್ಮಶಿವನ ವಿಚಾರಗಳು', 'ನಾಗಚಂದ್ರನ ಜಲ ರಾವಣ' ಲೇಖನಗಳು ಪ್ರಾಯೋಗಿಕ ವಿಮರ್ಶೆಗೆ ಅತ್ಯುತ್ತಮ ಉದಾಹರಣೆಗಳಾಗಿವೆ.

2. ನಡುಗನ್ನಡ: ಕಲಬುರ್ಗಿಯವರು ವಚನ ಸಾಹಿತ್ಯ ಮತ್ತು ವಚನಕಾರರನ್ನು ಕುರಿತು ಮೌಲಿಕ ಲೇಖನಗಳನ್ನು ಬರೆದಿದ್ದಾರೆ. 'ಬಸವಣ್ಣನವರ ಜನನದ ಉದ್ದೇಶ', 'ಮಹಾಲಿಂಗದೇವ ಮತ್ತು ಬಸವಣ್ಣನವರ ಪೂರ್ವಜರು', 'ಬಸವಣ್ಣನವರ ಅಡ್ಡಹೆಸರು' ಹೀಗೆ ಬಸವಣ್ಣನವರ ಇತಿವೃತ್ತ ವಿಚಾರ, ಅವರು ಕಟ್ಟಬಯಸಿದ ಸಮಾಜ, ಮಾಡಿದ ಕ್ರಾಂತಿ

ಈ ಎಲ್ಲ ವಿಷಯಗಳನ್ನು ಅರ್ಥಪೂರ್ಣವಾಗಿ ಚರ್ಚಿಸಿದ್ದಾರೆ. ದೇವರ ದಾಸಿಮಯ್ಯ ಮತ್ತು ಜೇಡರ ದಾಸಿಮಯ್ಯ ಇಬ್ಬರು ಬೇರೆ ಬೇರೆ ಎಂಬುದು ಕಲಬುರ್ಗಿಯವರ ಖಚಿತ ನಿಲುವಾಗಿತ್ತು. ದೇವರ ದಾಸಿಮಯ್ಯನು ವೀರಶೈವ ಸನ್ಯಾಸಿ, ಬ್ರಹ್ಮಚಾರಿ; ಜೇಡರ ದಾಸಿಮಯ್ಯನು ಗೃಹಸ್ಥ, ನೇಕಾರ ಸಮುದಾಯಕ್ಕೆ ಸೇರಿದವನು, ಆದ್ಯ ವಚನಕಾರ ಎಂಬುದನ್ನು ಕಲಬುರ್ಗಿಯವರು ಸಕಾರಣವಾಗಿ ಪ್ರತಿಪಾದಿಸಿದ್ದಾರೆ. 'ಸಿದ್ಧರಾಮ-ಬಸವಣ್ಣ-ಪಂಡಿತಾರಾಧ್ಯ', 'ವಿಕಾರಿಸಿದ್ಧ-ಶಿವಸಿದ್ಧ', 'ರೇವಣಸಿದ್ಧ-ಸಿದ್ಧರಾಮ', ಸೋಲಾಪುರ ದೇವಾಲಯ-ಅವಶೇಷಗಳು' ಮುಂತಾದ ಲೇಖನಗಳು ಸೊನ್ನಲಿಗೆ ಸಿದ್ಧರಾಮನ ವ್ಯಕ್ತಿತ್ವ ಮತ್ತು ಸಾಧನೆಯ ಬಗ್ಗೆ ಹೊಸ ಹೊಳಹುಗಳನ್ನು ಹೊಮ್ಮಿಸುತ್ತವೆ.

3. ಹೊಸಗನ್ನಡ: ಹೊಸಗನ್ನಡದಲ್ಲೂ ಕಲಬುರ್ಗಿಯವರ ಸಂಶೋಧನ ನೋಟ ಹರಿಯದೆ ಇರಲಿಲ್ಲ. ಅದರಲ್ಲೂ 'ಬಿ.ಎಂ.ಶ್ರೀ. ಅವರ ಸಾಹಿತ್ಯ ಚರಿತ್ರೆಯ ವಿಚಾರಗಳು' ಲೇಖನದ "ಬಿ.ಎಂ.ಶ್ರೀ.ಯವರು ಮೂಲತಃ ಪ್ರಥಮ ದರ್ಜೆಯ ಒಬ್ಬ ಲೇಖಕರೇ ಅಲ್ಲ; ಪ್ರಪ್ರಥಮ ದರ್ಜೆಯ ಒಂದು ಪ್ರೇರಣೆ"(ಮಾರ್ಗ-1, 575) ಅವರ ಹೇಳಿಕೆಯು ಆಶ್ಚರ್ಯ, ಕುತೂಹಲ ಮತ್ತು ಕಲಬುರ್ಗಿಯವರ ಬರೆಹದ ಪ್ರೌಢಿಮೆಯನ್ನು ಸಾಬೀತುಪಡಿಸುತ್ತದೆ. ಅದೇ ರೀತಿ ವೆಂಕಣ್ಣಯ್ಯನವರ ವಿಮರ್ಶೆ, ಸಂಶೋಧನೆ, ಸಂಪಾದನೆ, ಗೋವಿಂದಪೈಗಳ ಸಂಶೋಧನಾ ವಿಧಾನ ಮತ್ತು ಸಾಧನೆ, ಪು.ತಿ.ನ. ಅವರ ಕಾವ್ಯಭಾಷೆ, ವಿನಾಯಕರ ಕಾವ್ಯ, ಪ್ರೊ. ಮಾಳವಾಡರ ವಿಚಾರ ಸಾಹಿತ್ಯ, ಸ್ವಾತಂತ್ರ್ಯ ಚಳುವಳಿಯ ಸಂದರ್ಭ ಮತ್ತು ಆಧುನಿಕ ಕನ್ನಡ ಸಾಹಿತ್ಯ, ನಾಟಕ: ಕೆಲವು ವಿಚಾರಗಳು, ಮಂಜಪ್ಪನವರ ಸಾಹಿತ್ಯದ ಸ್ವರೂಪ, ಕಾದಂಬರಿಕಾರನ ಕಥೆ, ಕನ್ನಡ ಸಾಹಿತ್ಯ ಚರಿತ್ರೆಗೆ ಕಿಟೆಲ್ಲರ ಕೊಡುಗೆ ಎಂಬ ಪ್ರೌಢ ಪ್ರಬಂಧಗಳನ್ನು ರಚಿಸಿದ್ದಾರೆ.

**7. ಕನ್ನಡ ಸಂಸ್ಕೃತಿ:**

ಕನ್ನಡ ನಾಡು-ನುಡಿ, ಸಂಸ್ಕೃತಿ-ಪರಂಪರೆಯ ಬಗೆಗಿನ ಪ್ರೀತಿ-ಅಭಿಮಾನಗಳು ಕಲಬುರ್ಗಿಯವರ ಉಸಿರಿನ ಭಾಗವೇ ಆಗಿದ್ದವು. "ಪರಂಪರೆಯಲ್ಲಿ ಪ್ರಜ್ಞೆಯಿಲ್ಲದವನಿಗೆ ಈ ದೇಶವೂ ಅಷ್ಟೇ, ಪರದೇಶವೂ ಅಷ್ಟೇ. ಈ ಭಾಷೆಯೂ ಅಷ್ಟೇ, ಪರಭಾಷೆಯೂ ಅಷ್ಟೇ. ಅಂಥವನಿಗೆ ಉಪಜೀವನ ಮುಖ್ಯವಾಗಿರುತ್ತದೆಯೇ ಹೊರತು, ಜೀವನವಲ್ಲ. ವ್ಯಕ್ತಿಕೇಂದ್ರಿತವಾಗಿ ಬದುಕುವುದು ಉಪಜೀವನ, ಪರಂಪರೆಕೇಂದ್ರಿತವಾಗಿ ಬದುಕವುದು ಜೀವನ. ವ್ಯಕ್ತಿಕೇಂದ್ರಿತವಾದವನು ಪರಂಪರೆಗೆ ವಿಮುಖನಾಗಿ ಬೆಳೆಯುವುದರಿಂದ, ಅವನಿಗೆ ಸ್ವಂತ ಮನೆಯೂ ಅಷ್ಟೇ, ಬಾಡಿಗೆಮನೆಯೂ ಅಷ್ಟೇ. ಅವನು ತನ್ನ ಮನೆಯನ್ನು ಸಹ ಭೌತಿಕ ನೆಲೆಯಿಂದ ನೋಡುವವನೇ ಹೊರತು, ಅದರಾಚೆಯ ಸಾಂಸ್ಕೃತಿಕ ಮೌಲ್ಯದಿಂದ ನೋಡುವುದಿಲ್ಲ"(ಮಾರ್ಗ-6, ಪು. 66) ಎನ್ನುವ ಕಲಬುರ್ಗಿಯವರ ಕನ್ನಡ ಸಂಸ್ಕೃತಿ-ಪರಂಪರೆಯ ಬಗೆಗಿನ ಅಭಿಮಾನ ಅನುಕರಣೀಯವಾದುದಾಗಿತ್ತು.

'ವಚನಕಾರರ ಲಿಂಗಾಯತ ಧರ್ಮವು ಹಿಂದೂ ಧರ್ಮದ ಭಾಗವಲ್ಲ, ಅದು ವೈದಿಕ ಧರ್ಮಕ್ಕೆ ಪರ್ಯಾಯವಾಗಿ ಹುಟ್ಟಿಕೊಂಡ ಕನ್ನಡ ನಾಡಿನ, ಕನ್ನಡಿಗರ ಪ್ರತ್ಯೇಕ ಧರ್ಮ, ಜೈನ, ಬೌದ್ಧಗಳಂತೆ ಹಿಂದೂ ಧರ್ಮ ಉತ್ತರದಿಂದ ವಲಸೆ ಬಂದು ಇಲ್ಲಿನ ದೇಶಿ ಧರ್ಮದ ಮೇಲೆ ದಾಳಿಮಾಡಿ ತನ್ನ ನೆಲೆಯನ್ನು ವಿಸ್ತರಿಸಿಕೊಂಡಿದೆ' ಎಂದು ತಮ್ಮ ಮಾತು ಮತ್ತು ಬರವಣಿಗೆಗಳ ಮೂಲಕ ಮತ್ತೆ ಮತ್ತೆ ಪ್ರತಿಪಾದಿಸಿದ ಕಲಬುರ್ಗಿಯವರು ವೀರಶೈವ (ದ್ವೈತ) ಬೇರೆ, ಲಿಂಗಾಯತ (ಅದ್ವೈತ) ಬೇರೆ, ಶರಣರು ಕಟ್ಟಿದ್ದು ಲಿಂಗಾಯತ ಧರ್ಮ

ಎಂಬುದಕ್ಕೆ ವಚನಗಳ, ಶಾಸನಗಳ ವಿಶ್ಲೇಷಣೆ, ವ್ಯಾಖ್ಯಾನದ ಮೂಲಕ ಪ್ರತಿಪಾದಿಸಿದರು.

ಕಲಬುರ್ಗಿಯವರ ಕನ್ನಡ ಸಾಂಸ್ಕೃತಿಕ ಪ್ರಜ್ಞೆಯ ಹಿಂದೆ ಒಂದು ಘಾಸಿಗೊಂಡ ಮನಸ್ಸಿತ್ತು. ಅನ್ಯಧರ್ಮ, ಅನ್ಯಭಾಷೆ, ಅನ್ಯಸಂಸ್ಕೃತಿಯ ಆಡಳಿತವು ಕನ್ನಡ ನಾಡಿನ ಮೇಲೆ, ಈ ನೆಲದ ಧರ್ಮ, ಭಾಷೆ, ಸಂಸ್ಕೃತಿಯ ಮೇಲೆ ದಾಳಿ ಮಾಡಿದೆ ಎಂಬುದೇ ಅವರ ಸಂಸ್ಕೃತಿ ಚಿಂತನೆಯ ಸಂಶೋಧನೆಗಳ ಹಿಂದಿನ ನಿಲುವಾಗಿತ್ತು. ಚಾವುಂಡರಾಯನ ತಮಿಳು ಪ್ರೀತಿ–ಗಂಗರಾಜನ ಮರಾಠಿ ಪ್ರೀತಿ, ವಿಷ್ಣುವರ್ಧನ: ತಮಿಳು ಸಂಸ್ಕೃತಿಯ ಆಗಮನ, ಕೃಷ್ಣದೇವರಾಯ: ತೆಲುಗು ಸಂಸ್ಕೃತಿಯ ಆಕ್ರಮಣ, ಚಿಕ್ಕದೇವರಾಯ: ತಮಿಳು ತೆಲುಗು ಸಂಸ್ಕೃತಿಗಳ ಸ್ಥಿರೀಕರಣ, ಕೃಷ್ಣದೇವರಾಯನ ಹಂಪಿ ಶಾಸನಗಳು ಮೊದಲಾದ ಲೇಖನಗಳು ಅವರ ಸಂಸ್ಕೃತಿ ಚಿಂತನೆಯ ಚಿಂತನೆಯ ಫಲಗಳಾಗಿವೆ.

**8. ಸಂಶೋಧನೆ:**

ಎಂ.ಎಂ. ಕಲಬುರ್ಗಿಯವರ 'ಕನ್ನಡ ಸಂಶೋಧನ ಶಾಸ್ತ್ರ'ವು ಅನುಭವಕೇಂದ್ರಿತ ಸಂಶೋಧನ ವಿಧಾನವನ್ನು ವಿಭಿನ್ನವಾಗಿ ಪ್ರಸ್ತುತಪಡಿಸುವ ವಿಶಿಷ್ಟ ಕೃತಿಯಾಗಿದೆ. ''ಈವರೆಗಿನ ನನ್ನ ಅನುಭವಗಳನ್ನೇ ನಿಯಮ ಮಾಡಿಕೊಂಡು, ನನ್ನ ಸಂಶೋಧನೆಯನ್ನೇ ನಿದರ್ಶನ ಮಾಡಿಕೊಂಡು ಈ ಪುಸ್ತಕ ರಚಿಸಿದ್ದೇನೆ. ಹೀಗಾಗಿ ಬಹಳಷ್ಟು ಸಲ ಇಲ್ಲಿ ನಿಯಮವೂ ನಾನೇ, ನಿದರ್ಶನವೂ ನಾನೇ ಆಗಿದ್ದೇನೆ''(ಅರಿಕೆ) ಎಂಬ ಸ್ಪಷ್ಟನೆಯು ಉಚಿತವಾಗಿದೆ. ಗಾತ್ರದಲ್ಲಿ ಕಿರಿದಾದರೂ ಮಹತ್ವದಲ್ಲಿ ಈಗಲೂ ಸಂಶೋಧನಾರ್ಥಿಗಳು ಗಮನಿಸಲೇಕಾದ ಕೃತಿಯಾಗಿದೆ.

''ಸಂಶೋಧನೆ ಎನ್ನುವುದು ಬಹಳಷ್ಟು ಸಲ ಅಲ್ಪವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ. ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಎಲ್ಲರೂ ಅಹುದೆಂಬುದು ಪ್ರಮಾಣವಲ್ಲ ಕಾಣಿರೋ, ಎಲ್ಲರೂ ಅಲ್ಲವೆಂಬುದು ಪ್ರಮಾಣವಲ್ಲ ಕಾಣಿರೋ, ಅಹುದೆಂಬುವನೂ ಅಲ್ಲವೆಂಬುವನೂ ಎನ್ನ ಮನೋಮೂರ್ತಿ ಮಹಾಲಿಂಗ ಗುರು ಶಿವ ಸಿದ್ಧೇಶ್ವರಪ್ರಭುವೇ ನೀನೇ ಬಲ್ಲೆ'(ತೋಂಟದ ಸಿದ್ಧಲಿಂಗ ಶಿವಯೋಗಿಗಳು) ಎಂಬ ವಚನವಂತೂ ನನ್ನನ್ನು ಸದಾ ಎಚ್ಚರಿಸುತ್ತಲಿದೆಯೆಂದು ವಿನಮ್ರವಾಗಿ ಹೇಳಬಯಸುತ್ತೇನೆ''(ಮಾರ್ಗ–6, ಪು. 76) ಎನ್ನುವ ಕಲಬುರ್ಗಿಯವರ ಚಿಂತನೆಗಳು ಇದುವರೆಗೂ ಗಮನಿಸಿದ ಅವರ ಸಂಶೋಧನ ಬರವಣಿಗೆಗಳಲ್ಲಿ ಪ್ರತಿಫಲಿತವಾಗಿರುವುದನ್ನು ಗಮನಿಸಬಹುದು.

ಸೃಜನಶೀಲ ಬರಹಗಾರರಿಗೆ ಜನಪ್ರಿಯತೆ, ಜನಮನ್ನಣೆ, ಗೌರವಾದರಗಳು ಸಾಮಾನ್ಯ. ಆದರೆ ಶಾಸ್ತ್ರ ಬರವಣಿಗೆ ಮೂಲಕ ಕಲಬುರಗಿಯವರಷ್ಟು ಜನಮನ್ನಣೆ/ದೂಷಣೆಗೆ ಒಳಗಾದವರು ಮತ್ತೊಬ್ಬರಿಲ್ಲ. ಒಂದೇ ಲೇಖನದಲ್ಲಿ ಸಾಹಿತ್ಯ, ಚರಿತ್ರೆ, ಗ್ರಂಥಸಂಪಾದನೆ, ಭಾಷಾಶಾಸ್ತ್ರ ಸೇರಿದಂತೆ ಹಲವು ಶಾಸ್ತ್ರ ವಿಷಯಗಳನ್ನು ಮೇಳೈಸುವ ಅಪರೂಪದ ವಿದ್ವತ್ತು ಅವರದಾಗಿತ್ತು. ''ಗ್ರಂಥಾಲಯದಲ್ಲಿ ಕಲಬುರ್ಗಿಯವರು ಒಂದೊಂದು ಪುಸ್ತಕ ಓದುವುದಿಲ್ಲ. ಒಂದೊಂದು ಕಪಾಟು ಓದುತ್ತಾರೆ'' ಎಂದು ವಿದ್ಯಾರ್ಥಿಗಳು ಮಾತನಾಡಿಕೊಳ್ಳುವ ರೀತಿಯಲ್ಲಿ ಈ ಬೃಹತ್ ಪುಸ್ತಕ ಭಂಡಾರವನ್ನು ಬಳಕೆ ಮಾಡಿಕೊಂಡ

ಪರಿಣಾಮವಾಗಿ ಇಂತಹ ಅಷ್ಟಮುಖಿ ಸಂಶೋಧನೆಯು ಸಾಧ್ಯವಾಯಿತು. ಬಾಲ್ಯದಲ್ಲಿ ತಂದೆಯವರಿಂದ "ಅಂಬಲಿ-ಕಂಬಳಿ ಆಸ್ತಿ, ಮಿಕ್ಕಿದ್ದೆಲ್ಲ ಜಾಸ್ತಿ" ಎಂಬ ನೀತಿಪಾಠವನ್ನು ಕಲಿತ ಕಲಬುರ್ಗಿಯವರು "ಕೆಲಸ ಮಾಡುವವನ ಮನಸ್ಸು ಸ್ವಚ್ಛವಿರುತ್ತದೆ" (ಶಿವಾನುಭವ ಪತ್ರಿಕೆ) ಹಳಕಟ್ಟಿಯವರ ಮಾತನ್ನು ವೇದವಾಕ್ಯದಂತೆ ಪಾಲಿಸಿದರು. ಪರಿಣಾಮವಾಗಿ "ಕಲಬುರ್ಗಿ ನನ್ನ ಸಕ್ಸಸ್ಸರ್" ಎಂದು ತಮ್ಮ ಗುರುಗಳಾದ ಆರ್.ಸಿ. ಹಿರೇಮಠ ಅವರ ಪ್ರಶಂಸೆಗೆ ಪಾತ್ರರಾದರು. ಒಟ್ಟಾರೆಯಾಗಿ 116 ಕೃತಿಗಳು, 868 ಲೇಖನಗಳ (493 ಶುದ್ಧ ಸಂಶೋಧನ ಸಂಪ್ರಬಂಧಗಳು, 375 ಇತರೆ ಲೇಖನಗಳು) ಮೂಲಕ ಬೃಹತ್ತು-ಮಹತ್ತುಗಳಲ್ಲಿ ಕನ್ನಡ ಸಂಶೋಧನೆಯ ಒಂಟಿ ಸಲಗವೇ ಆಗಿದ್ದಾರೆ.

**ಪರಾಮರ್ಶನ ಗ್ರಂಥಗಳು:**

1. ಜಿ. ಪಾಟೀಲ ಕಲ್ಯಾಣರಾವ., (2017) ಡಾ. ಎಂ.ಎಂ. ಕಲಬುರ್ಗಿಯವರ ಶೋಧಗಳು: ಡಾ. ಎಂ.ಎಂ. ಕಲಬುರ್ಗಿ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಮಠ, ಡಂಬಳ-ಗದಗ
2. ರುಮಾಲೆ ಮೃತ್ಯುಂಜಯ., ಸಮಗ್ರ ಸಂಶೋಧಕ ಎಂ ಎಂ ಕಲಬುರ್ಗಿ: ಪಲ್ಲವ ಪ್ರಕಾಶನ ಚನ್ನಪಟ್ಟಣ.
3. ಪಾಟೀಲ ಸಿದ್ದನಗೌಡ., (2022) ಎಂ.ಎಂ. ಕಲಬುರ್ಗಿ ನವಕರ್ನಾಟಕ ಪ್ರಕಾಶನ ಬೆಂಗಳೂರು.
4. ಅಂಗಡಿ ಎಸ್.ಎಸ್., (2020) ಆಧುನಿಕ ಕನ್ನಡ ಸಂಶೋಧನೆ: ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.